ನಾ ಧನ್ಯನಾದೆನಿಂದು

ನಾ ಧನ್ಯನಾದೆನಿಂದು ಸತ್ಯಬೋಧರಾಯರ ದಿವ್ಯ ಪಾದಪದುಮ ಕಂಡು ||ಪ|

ಹಿಂಗುವವಖಿಳ ದೋಷಂಗಳು ಈ ಮುನಿ ಪುಂಗವರಂಘ್ರಿ ಸಂದರುಶನದಿ |

ಗಂಗಾದಿ ಮೊದಲಾದ ಮಂಗಳ ಯುತವಾದ |

ತುಂಗಯಾಅತ್ರೆಯ ಫಲ ತಾ ಸಮವಎನಿಸುತ ||1||

ಆವ ಮುನಿಗಳೋ ಮತ್ತಾವ ದೇವತೆಗಳೋ |

ಅವರು ಬಲ್ಲರು ಇವರ ಮಹಿಮೆ

ಸೇವಿಪ ಸುಜನರ ಕೃಪಾವಲೋಕನದಿಂದ

ಪಾವನ ಮಾಡುವ ಕೋವಿದಾರ್ಯರ ಕಂಡು ||೨||

ಸೀತಾರಮಣ ಜಗನ್ನಾಥ ವಿಠಲರೇಯ ಭೂತಳದೊಳು ಈ ಮಹಾತ್ಮರನ್ನು

ಪ್ರೀತಿಯಿಂ ಸೃಜಿಸಿರಲು ಜಗದಿ ಜೀವರ | ಪುನೀತರನು ಮಾಡುವರಾದುದಕೆ ಈ ಕ್ಷಣದಿ ||೩||